# ಸ್ವಾಮಿ ಬೋಧಾನಂದ (೧೮೭೦-೧೯೫೦)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ**

ಅನುವಾದ: **ಕುಮಾರಿ ಪಿ. ಉಷಾ**

ಭಾಗ ೧

೧೯೭೭ರಲ್ಲಿ ನ್ಯೂಯಾರ್ಕ್ ವೇದಾಂತ ಸೊಸೈಟಿಯಿಂದ ಸ್ವಾಮಿ ಪವಿತ್ರಾನಂದರ ಒಂದು ಡೈರಿ ಸಿಕ್ಕಿತು. ಆ ಡೈರಿಯಿಂದ ಸ್ವಾಮಿ ಬೋಧಾನಂದರ ಈ ಅಮೂಲ್ಯ ಸ್ಮೃತಿಗಳನ್ನು ಸಂಗ್ರಹಿಸಿ ಸಂಪಾದಿಸಿದ್ದೇನೆ:



ಆಲಂಬಜಾರಿನಲ್ಲಿ ಸ್ವಾಮೀಜಿಯವರು ಧ್ಯಾನ ಮಾಡುವುದನ್ನು ಕಂಡಿರುವೆ. ಮೂರು-ನಾಲ್ಕು ಗಂಟೆಗಳ ಕಾಲ ದೇಹ ಬೋಧೆಯಿಲ್ಲದೆ ಧ್ಯಾನಿಸುತ್ತಿದ್ದರು. ನಿದ್ರಾವಸ್ಥೆಯಲ್ಲಿ ಉಸಿರಾಡುವಂತೆ ದೀರ್ಘ ಹಾಗೂ ಲಯಬದ್ಧ ಉಸಿರಾಟವಾಗಿರುತ್ತಿತ್ತು - ಇರುವೆ ಕಡಿದರೂ ಅರಿವಿಗೆ ಬರುತ್ತಿರಲಿಲ್ಲವೇನೋ ಎಂಬಂತಿತ್ತು. ಮುಖದ ಭಾವವೇ ಬೇರೆಯಾಗಿರುತಿತ್ತು. ಹರಿ ಮಹಾರಾಜರು ಗಂಭೀರ ಧ್ಯಾನದಲ್ಲಿ ಮಗ್ನರಾಗಿರುವುದನ್ನೂ ಕಂಡಿರುವೆ. ಆದರೆ ಸ್ವಾಮೀಜಿ ಹಾಗೂ ಹರಿ ಮಹಾರಾಜರು - ಇವರಿಬ್ಬರೂ ಧ್ಯಾನಮಗ್ನರಾಗಿದ್ದಾಗ ಅವರ ಮುಖಭಾವದಲ್ಲಿ ವ್ಯತ್ಯಾಸವಿರುತ್ತಿತ್ತು. ಸ್ವಾಮೀಜಿಯವರ ಮುಖಭಾವವನ್ನೂ ವರ್ಣಿಸಲಸಾಧ್ಯ.

ಹರಿ ಮಹಾರಾಜರು ಹಗಲಿರುಳೂ ಒಂದು ಬಗೆಯ ಭಾವದಲ್ಲಿರುತ್ತಿದ್ದರು - ಇನ್ನೊಂದು ಲೋಕದಲ್ಲಿ ಅವರು ಇದ್ದಂತೆ ಭಾಸವಾಗುತ್ತಿತ್ತು. ಇತರರು ತುಂಬ ಧ್ಯಾನ ಜಪವನ್ನೂ ಮಾಡುತ್ತಿದ್ದರೂ, ವಿನೋದ-ತಮಾಷೆಗಳಲ್ಲೂ ತೊಡಗುತ್ತಿದ್ದರು; ಆದರೆ ಹರಿ ಮಹಾರಾಜರು ಸದಾ ಜಾಗೃತರೂ, ಸಚೇತನರೂ ಆಗಿರುತ್ತಿದ್ದರು. ಆಲಂಬಜಾರಿನ ಮಠದಲ್ಲಿ ಅವರು ನಮಗಾಗಿ ನ್ಯಾಯ ಶಾಸ್ತ್ರದ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು.

೧೮೯೦ರಲ್ಲಿ ನಾನು ಬಾರಾನಗರದ ಮಠಕ್ಕೆ ಆಗಾಗ ಹೋಗಿ ಬರುತ್ತಿದ್ದೆ. ಆಗ ಆಹಾರಕ್ಕೆ ಕೊರತೆಯಿದ್ದರೂ, ಅತ್ಯಂತ ಸರಳವಾಗಿತ್ತು. ಒಂದೇ ಕುಟುಂಬಕ್ಕೆ ಸೇರಿದವರಂತೆ ಎಲ್ಲರೂ ಒಂದೇ ಕೋಣೆಯಲ್ಲಿ ವಾಸಿಸುತ್ತಿದ್ದೆವು. ಕೃತಕ ಶಿಸ್ತಾಗಲಿ, ತರಬೇತಿಯಾಗಲಿ ಆಗ ಇರಲಿಲ್ಲ. ಈಗಿನಂತೆಯೆ ಆಗಲೂ ಬಹಳ ಸ್ವಾತಂತ್ರ್ಯವಿತ್ತು. ಆದರೆ ಎಲ್ಲರೂ ಧ್ಯಾನ ಭಜನೆಗಳಲ್ಲಿ ತೊಡಗುತ್ತಿದ್ದರು. ಅವರನ್ನು ನೋಡಿ ನಾವೂ ಅನುಸರಿಸುತ್ತಿದ್ದೆವು.

ಕಾಳಿ ಮಹಾರಾಜರು 'ವಸಂತ' ಎಂಬ ಒಬ್ಬ ಹುಡುಗನನ್ನು ಮಠಕ್ಕೆ ಕರೆದುಕೊಂಡು ಬಂದರು. ಅವರು ಅವನಿಗೆ 'ಲಘು ಕೌಮುದಿ' ಹಾಗೂ ಇತರ ಸಂಸ್ಕೃತ ವ್ಯಾಕರಣವನ್ನು ಕಲಿಸುವುದನ್ನು ಕಂಡು ಅನೇಕರು ಹಾಸ್ಯ ಮಾಡುತ್ತಿದ್ದರು. ಇತರ ಸಾಧುಗಳು ಹೆಚ್ಚಾಗಿ ಪುಸ್ತಕಗಳನ್ನೋದುವುದನ್ನು ಇಷ್ಟಪಡುತ್ತಿರಲಿಲ್ಲ. ಕಾಳಿ ಮಹಾರಾಜರು ಒಂದು ಕೋಣೆಯಲ್ಲಿ ತಮ್ಮ ಅಧಿಕಾಂಶ ಸಮಯವನ್ನು ಧ್ಯಾನ, ಜಪ, ಅಧ್ಯಯನಗಳಲ್ಲಿ ಕಳೆಯುತ್ತಿದ್ದರು. ಜನರೊಂದಿಗೆ ಅವರು ಅಷ್ಟಾಗಿ ಬೆರೆಯುತ್ತಿರಲಿಲ್ಲ. ಕೆಲವು ದಿನಗಳು ಮಠದಲ್ಲಿ ಇದ್ದು ಮತ್ತೆ ಹೊರಗೆ ಹೋಗುತ್ತಿದ್ದರು. ಅವರು ಕಾಲ್ನಡಿಗೆಯಲ್ಲೇ 'ಚಾರ್‌ಧಾಮ್' ಯಾತ್ರೆಯನ್ನು ಮಾಡಿದರು.

ಸ್ವಾಮೀಜಿಯ ಶಿಕಾಗೋ ಭಾಷಣದ ನಂತರ ಕಲ್ಕತ್ತದಲ್ಲಿ ನಡೆದ ಸಭೆಗಾಗಿ ಸ್ವಾಮಿ ಅಭೇದಾನಂದರು ಬಹಳಷ್ಟು ಕೆಲಸ ಮಾಡಿದರು - ಹೇಳತೀರದ ಶ್ರಮಪಟ್ಟಿದ್ದರು; ಬಳಿಕ ಈ ಭಾಷಣಗಳನ್ನು ಮುದ್ರಿಸಿದರು.

ನಾನು ಮೊದಲು ರಾಮಬಾಬು ಅವರ ಪ್ರಭಾವಕ್ಕೆ ಬಂದಿದ್ದೆ. ಅವತಾರವಾದದ ಪ್ರಚಾರಕರಾಗಿದ್ದ ರಾಮ ಬಾಬು, ಶ್ರೀರಾಮಕೃಷ್ಣರು ಅವತಾರ ಪುರುಷರೆಂಬ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದರು.

ಬಾರಾನಗರದಲ್ಲಿ ಅವರೆಲ್ಲ ನನ್ನನ್ನು ಎಷ್ಟೊಂದು ಪ್ರೀತಿಸುತ್ತಿದ್ದರು! ಇದನ್ನು ವರ್ಣಿಸಲಾಗದು. ಹರಿ ಮಹಾರಾಜರು ಎಲ್ಲರೊಡನೆ ಸ್ವಲ್ಪ ಬಿಗುಮಾನದಿಂದ ವರ್ತಿಸುತ್ತಿದ್ದರೂ, ನನ್ನೊಂದಿಗೆ ತುಂಬ ಮುಕ್ತರಾಗಿ ಬೆರೆಯುತ್ತಿದ್ದರು.

ಮೊದಲಿನಿಂದಲೇ ನಾವು ಪವಾಡಗಳಿಗೆ ಅಷ್ಟಾಗಿ ಪ್ರಾಧಾನ್ಯತೆ ನೀಡಿದವರಲ್ಲ. ಸ್ವಾಮೀಜಿ ಪವಾಡಗಳ ಬಗ್ಗೆ ತುಂಬ ತಮಾಷೆ ಮಾಡುತ್ತಿದ್ದರು.

ಹಲವರು ತಮ್ಮ ಕುಂಡಲಿನಿ ಜಾಗೃತವಾಗಿದೆಯೆಂದೂ, ಅನೇಕರು ತಮಗೆ ಜ್ಞಾನವು ಲಭಿಸಿದೆಯೆಂದೂ, ನಮ್ಮ ಕಾಲದಲ್ಲೂ ಹೇಳುತ್ತಿದ್ದುದುಂಟು; ಆದರೆ ಯಾರ ಜೀವನದಲ್ಲೂ ಅವುಗಳ ಲಕ್ಷಣಗಳು ಕಂಡುಬರುತ್ತಿರಲಿಲ್ಲ. ಸ್ವಾಮೀಜಿ ಇವುಗಳ ಬಗ್ಗೆ ಹಾಸ್ಯ ಮಾಡುತ್ತಿದ್ದರು. ''ಯಾವ ನಿತ್ಯಗೋಪಾಲ ಮಹಾರಾಜರಿಗೆ ಅಷ್ಟೊಂದು ಭಾವೋನ್ಮಾದವಾಗುತ್ತಿತ್ತೋ ಅದಕ್ಕೂ ಅನೇಕ ಪಟ್ಟು ಹೆಚ್ಚಿನ ಉನ್ನತಿಯನ್ನು ನಮ್ಮ ಶರತ್ ಮಹಾರಾಜ್ ಮುಂತಾದವರು ಪಡೆದಿದ್ದಾರೆ'' ಎಂದು ಸ್ವಾಮೀಜಿ ಅನೇಕ ಬಾರಿ ಹೇಳಿದ್ದರು.

ರಾಜಾ ಮಹಾರಾಜರು ಎಲ್ಲರಿಗಿಂತ ಭಿನ್ನರೆಂದು ಮೊದಲಿನಿಂದಲೇ ನಮಗನಿಸುತ್ತಿತ್ತು. ಮಹಾರಾಜ್ ಹಾಗೂ ಹರಿ ಮಹಾರಾಜರನ್ನು ಕಂಡೊಡನೆಯೆ, ಅವರು ಈಗಾಗಲೇ ಆಧ್ಯಾತ್ಮಿಕವಾಗಿ ಏನನ್ನೋ ಪಡೆದಿರುವರು; ಈಗ ಸುಮ್ಮನೆ ಸಾಧನೆ-ಭಜನೆಗಳನ್ನು ಮಾಡುತ್ತಿದ್ದಾರೆ, ಎಂದೆನಿಸುತ್ತಿತ್ತು-ಅವರು ಭಾವೋನ್ಮತ್ತರಾಗಿ ಸಾಧನೆ -ಭಜನೆಗಳನ್ನು ಮಾಡುತ್ತಿದ್ದರು.

ನಾಗ ಮಹಾಶಯರು ಉರಿಯುವ ಅಗ್ನಿಯಂತಿದ್ದರು. ಅವರು ಸರ್ವದಾ ಒಂದು ಬಗೆಯ ಉನ್ನತ ಭಾವದಲ್ಲಿದ್ದು, ಒಂದೇ ಒಂದು ಕ್ಷಣಕ್ಕೂ ಆ ಭಾವದಿಂದ ಚ್ಯುತರಾಗುತ್ತಿರಲಿಲ್ಲ. ಒಂದು ವೇಳೆ ಠಾಕೂರರೇನಾದರೂ ಬಾರದಿರುತ್ತಿದ್ದರೆ ಅವರೆ ಅವತಾರ ಪುರುಷರು ಎಂಬಂತೆ ತೋರುತ್ತಿತ್ತು. ಠಾಕೂರರು ಬಂದದ್ದರಿಂದ ನಾಗ ಮಹಾಶಯರನ್ನು ಭಕ್ತರೆಂದು ಪರಿಗಣಿಸಲಾಗಿದೆ.

ಸ್ವಾಮೀಜಿ ಒಬ್ಬ ಮಹಾನ್ ಆಧ್ಯಾತ್ಮಿಕ ವ್ಯಕ್ತಿ ಎಂಬುದು ಅವರನ್ನು ಕಂಡಾಕ್ಷಣವೇ ತಿಳಿಯುತ್ತಿತ್ತು. ಅವರು ಸಮಾಜ ಶಾಸ್ತ್ರ, ಶಿಕ್ಷಣ, ದೇಶದ ವಿವಿಧ ಸಮಸ್ಯೆಗಳ ಮುಂತಾದವುಗಳ ಬಗ್ಗೆ ಮಾತನಾಡುತ್ತಿದ್ದರೂ, ಅವೆಲ್ಲ ಒಂದೇ ರತ್ನದ ವಿವಿಧ ಮುಖಗಳಷ್ಟೆ. ಅವರ ಅಂತರ್ಯದಲ್ಲಿದ್ದುದು ಅಸಾಧಾರಣ ಆಧ್ಯಾತ್ಮಿಕ ಭಾವ, ಹಾಗೂ ಇವೆಲ್ಲ ಅದರದೆ ವಿಭಿನ್ನ ಅಭಿವ್ಯಕ್ತಿ. ಶ್ರೋತೃಗಳು ಯಾವ ಶ್ರೇಣಿಯವರೇ ಆಗಿರಲಿ, ಅವರು ಸಮಸ್ತ ಸಮಸ್ಯೆಗಳನ್ನೂ ತಮ್ಮ ಆಂತರ್ಯದ ಆಧ್ಯಾತ್ಮಿಕ ದೃಷ್ಟಿಯಿಂದ ನೋಡುತ್ತಿದ್ದರು.

ಅಂದಿನ ದಿನಗಳಲ್ಲಿ ಧ್ಯಾನ ಜಪಗಳೊಂದಿಗೆ ಕೆಲವು ಸ್ತೋತ್ರಗಳನ್ನು ಪಠಿಸುವುದು ಮಠದಲ್ಲಿ ರೂಢಿಯಲ್ಲಿತ್ತು. ಯಾರೋ ಕಿರಿಯ ಉಪನಿಷತ್ತನ್ನು ಪಠಿಸಿದರೆ ಮತ್ತಾರೋ ಭಗವದ್ಗೀತೆಯ ಸ್ವಾಧ್ಯಾಯವನ್ನು ಮಾಡುತ್ತಿದ್ದರು. ಇದರಿಂದಾಗಿ ಅನೇಕರು ಸಂಸ್ಕೃತ ಶ್ಲೋಕಗಳನ್ನು ನೆನಪಿನಿಂದ ಹೇಳಬಲ್ಲವರಾಗಿದ್ದರು.

ಹರಿ ಮಹಾರಾಜರು ಚಿಕ್ಕಂದಿನಿಂದಲೂ ಬ್ರಹ್ಮಚಾರಿಯ ಜೀವನವನ್ನು ನಡೆಸುತ್ತ ತಾವೇ ಅಡಿಗೆ ಮಾಡಿಕೊಳ್ಳುತ್ತಿದ್ದರು. ತಾಯಿಗೆ ಸಮಾನರಾದ ತಮ್ಮ ಅತ್ತಿಗೆ ಮಾಡಿದ ಅಡಿಗೆಯನ್ನು ಸ್ವೀಕರಿಸಲು ಹಿಂಜರಿಯುತ್ತಿದ್ದರು.

ಪೂರ್ಣ ಬಾಬು ಗೃಹಸ್ಥರಾಗಿದ್ದರೂ ಅವರನ್ನು ಕಂಡೊಡನೆಯೆ ಅಸಾಮಾನ್ಯ ವ್ಯಕ್ತಿಯೆಂಬುದು ತಿಳಿದು ಹೋಗುತ್ತಿತ್ತು. ಹೊರನೋಟಕ್ಕೆ ಅತಿ ಸಾಮಾನ್ಯರಂತಿದ್ದರು; ಹೆಚ್ಚು ಮಾತನಾಡುತ್ತಿರಲಿಲ್ಲ. ಸಿಮ್ಲಾದಲ್ಲಿದ್ದಾಗ 'ಪ್ರಬುದ್ಧ ಭಾರತ' ಪತ್ರಿಕೆಯನ್ನು ಅವರಿಗೆ ಕಳುಹಿಸಲಾಗುತ್ತಿತ್ತು. ಪತ್ರಿಕೆ ಕೈಸೇರಿದೊಡನೆಯೆ ಅದನ್ನು ಪೆಟ್ಟಿಗೆಯಲ್ಲಿರಿಸುತ್ತಿದ್ದರು. ರಾತ್ರಿ ಎಲ್ಲರೂ ನಿದ್ರಿಸಿದಾಗ ಬಾಗಿಲು ಮುಚ್ಚಿ ಅದನ್ನು ಓದುತ್ತಿದ್ದರು. 'ಠಾಕೂರರು ನನ್ನನ್ನು ಎಷ್ಟು ಪ್ರಶಂಸಿಸುತ್ತಿದ್ದರು, ನಾನು ಮಾತ್ರ ಗೃಹಸ್ಥನಾದೆ -ಎಂಥ ನಾಚಿಕೆಗೇಡು! ನನ್ನ ಬಗ್ಗೆ ಠಾಕೂರರು ಏನು ಹೇಳಿದ್ದರೆಂದು ಜನರಿಗೆ ತಿಳಿಯದಿದ್ದರೆ ಒಳ್ಳೆಯದು' ಎಂದು ಭಾವಿಸುತ್ತಿದ್ದರೇನೋ! ನಾವು ಅವರಲ್ಲಿಗೆ ಹೋದರೆ ಬಹಳ ಸತ್ಕಾರ ಮಾಡುತ್ತಿದ್ದರು. ನಾನು ಅವರ ಬಾಗ್‌ಬಜಾರಿನ ಮನೆಯಲ್ಲಿ ಅನೇಕ ಬಾರಿ ಚಹಾ ಕುಡಿದಿದ್ದೇನೆ. ಬಹು ಮಂದಿ ಚಹಾ ಕುಡಿಯಲೆಂದು ಅವರ ಮನೆಯಲ್ಲಿ ಸೇರುತ್ತಿದ್ದರು. ಅವರು ಅತ್ಯಂತ ನಿರಹಂಕಾರಿಯೂ ಸರಳರೂ ಆಗಿದ್ದರು. ಮಠಕ್ಕೆ ಬಂದರೆ ಸ್ವಲ್ಪವೂ ಮಾತನಾಡುತ್ತಿರಲಿಲ್ಲ. ಪೂರ್ಣಬಾಬುಗೆ ಹೆಣ್ಣು ಮಕ್ಕಳಿದ್ದರು. ಅವರಿಗೆಲ್ಲ ಮದುವೆ ಮಾಡುತ್ತ ಅವರಲ್ಲಿದ್ದ ಹೆಚ್ಚಿನ ಹಣ ಖರ್ಚಾಯಿತು.

ಠಾಕೂರರು ಭವನಾಥರನ್ನು ತುಂಬ ಕೊಂಡಾಡುತ್ತಿದ್ದರು. ಭವನಾಥರು ಹಲವು ಸ್ತ್ರೀಗುಣ ಸಂಪನ್ನರು. ಮಠದ ಅನೇಕರು ಅವರನ್ನು ತಮಾಷೆ ಮಾಡುತ್ತಿದ್ದರು. ಮೊದಲು ಅವರ ಬ್ರಹ್ಮ ಸಮಾಜದಿಂದ ಪ್ರಭಾವಿತರಾಗಿದ್ದರು. ಅವರೊಮ್ಮೆ ಆಲಂಬಜಾರಿನ ಮಠಕ್ಕೆ ಬಂದಾಗ ದೇವರ ಮನೆಯಲ್ಲಿ ಕುಳಿತು ಸ್ವಲ್ಪ ಹೊತ್ತು ಧ್ಯಾನ ಭಜನೆಗಳನ್ನು ಮಾಡಿ ಬ್ರಾಹ್ಮೋ ಸಂಗೀತದಲ್ಲಿ ತೊಡಗಿದ್ದರು -'ಕಳೆಯಬೇಕೆ ದಿನಗಳೆಲ್ಲ ವಿಫಲವಾಗಿ ಹೋಗಿಯೇ! ಹಗಲು ಇರುಳು ಆಶಾಪಥವ ಕಾಯುತಿಹೆನು ಸ್ವಾಮಿಯೇ!...' ಎಂದು ಹಾಡುತ್ತ ಹಾಡುತ್ತ ಕಣ್ಣೀರ್ಗರೆದರು. ಕೇಳಲು ಅತ್ಯಂತ ಕರುಣಾಜನಕವಾಗಿತ್ತು!